ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 3, Nov-Dec 2019, 15-19
©IIMRD, Mysuru
IIMRD JOURNALS
www.iimrd.com

# ಪಂಚಾಯತ್ ರಾಜ್ ಸಂಸ್ಥೆಗಳಲ್ಲಿನ ಮಹಿಳಾ ಸದಸ್ಯರು ಎದುರಿಸುತ್ತಿರುವ ಸಮಸ್ಯೆಗಳು: ಒಂದು ಅಧ್ಯಯನ

**ಸೌಭಾಗ್ಯ ಆರ್[1]**

**ಪೀಠಿಕೆ**

ಭಾರತವು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ಬೃಹತ್ ರಾಷ್ಟ್ರವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಯಶಸ್ವಿಯಾಗಬೇಕಾದರೆ, ದೇಶದ ರಾಜಕೀಯ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ಪ್ರಜೆಯು ಸಕ್ರಿಯವಾಗಿ ಪಾಲ್ಗೊಳ್ಳಬೇಕಾಗುತ್ತದೆ. ಹಾಗಾಗಿ ದೇಶದ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರ ಭಾಗವಹಿಸುವಿಕೆಯೂ ಕೂಡ ಅತ್ಯಗತ್ಯವೆಂಬುದು ಇಲ್ಲಿ ಗಮನಿಸಬೇಕಾದ ಅಂಶವಾಗಿದೆ. ಆದರೆ ದೇಶದ ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಪ್ರಾತಿನಿಧ್ಯತೆಯನ್ನು ಗಮನಿಸಿದಾಗ ಮಹಿಳೆಯರ ಪ್ರಮಾಣಕ್ಕನುಸಾರವಾಗಿ ಪ್ರಾತಿನಿಧ್ಯತೆಯನ್ನು ನೀಡಿಲ್ಲದಿರುವುದನ್ನು ಕಾಣಬಹುದು. ಹಾಗಾಗಿ ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರಿಗೆ ನ್ಯಾಯಯುತವಾದ ರಾಜಕೀಯ ಸ್ಥಾನಮಾನ ನೀಡಲು ಹಾಗೂ ಅವರನ್ನು ರಾಜಕೀಯವಾಗಿ ಸಬಲರನ್ನಾಗಿ ಮಾಡಲು ಸಂವಿಧಾನದ 73 ಮತ್ತು 74ನೇ ತಿದ್ದುಪಡಿ ಮೂಲಕ ರಚಿಸಿದ ಸ್ಥಳೀಯ ಸರ್ಕಾರಗಳ ರಚನೆಯಲ್ಲಿ ಮಹಿಳೆಯರಿಗೆ ಮೂರನೇ ಒಂದರಷ್ಟು ಅಂದರೆ ಶೇ.33.3 ರಷ್ಟು ಸ್ಥಾನಗಳನ್ನು ಮೀಸಲಿಡಲಾಯಿತು. ಏಪ್ರಿಲ್ 24, 1993ರಂದು ಜಾರಿಗೆ ಬಂದ ಪಂಚಾಯತ್ ರಾಜ್ ಕಾಯ್ದೆಯ ಫಲವಾಗಿ 1995 ರಲ್ಲಿ ನಡೆದ ಸ್ಥಳೀಯ ಸರ್ಕಾರಗಳ ಚುನಾವಣೆಯಲ್ಲಿ ದೇಶದಾದ್ಯಂತ ಹೆಚ್ಚಿನ ಸಂಖ್ಯೆಯ ಮಹಿಳೆಯರು ಆಯ್ಕೆಯಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿರುವುದು ಶ್ಲಾಘನೀಯವಾಗಿದೆ.

ಪ್ರಸ್ತುತ ಲೇಖನದಲ್ಲಿ ಸಂಶೋಧನಾರ್ಥಿಯು ಸ್ಥಳೀಯ ಸಂಸ್ಥೆಗಳಾದ ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗೆ ಆಯ್ಕೆಯಾಗಿರುವ ಮಹಿಳಾ ಸದಸ್ಯರ ಸಾಮಾನ್ಯ ಸಮಸ್ಯೆಗಳನ್ನು ವಿವಿಧ ಗ್ರಂಥಗಳನ್ನು ಪರಾಮರ್ಶಿಸಿ ವಿಶ್ಲೇಷಿಸಿದ್ದಾರೆ. ಕೇಂದ್ರ ಸರ್ಕಾರವು ಮಹಿಳೆಯರಿಗೆ ಇನ್ನೂ ಹೆಚ್ಚಿನ ಪ್ರಾತಿನಿಧ್ಯತೆಯನ್ನು ಕಲ್ಪಿಸುವ ದೃಷ್ಟಿಯಿಂದ ಸಂವಿಧಾನದ 243D ತಿದ್ದುಪಡಿ ವಿಧೇಯಕವನ್ನು ಜಾರಿಗೆ ತಂದು, ಪಂಚಾಯತ್ ರಾಜ್ ವ್ಯವಸ್ಥೆಯ ಮೂರು ಹಂತಗಳಾದ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಶೇಕಡ 50% ರಷ್ಟು ಸ್ಥಾನಗಳನ್ನು ಮೀಸಲಿರಿಸಿತು. ಈ ಹಿನ್ನೆಲೆಯಲ್ಲಿ ಕರ್ನಾಟಕವು ಕೂಡ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ–2010ರ ಮೂಲಕ ಪಂಚಾಯತ್‌ಗಳಲ್ಲಿ ಮಹಿಳೆಯರಿಗೆ ಶೇ. 50ರಷ್ಟು ಸ್ಥಾನಗಳನ್ನು

*[1]ಸಂಶೋಧನಾ ವಿದ್ಯಾರ್ಥಿನಿ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿ.ವಿ. ಮೈಸೂರು.*

ಮೀಸಲಿರಿಸಿತು. ಇದ್ದರಿಂದ ಮಹಿಳೆಯರ ರಾಜಕೀಯ ಸುಧಾರಣೆ ಸಾಧ್ಯವಾಯಿತು. ಆದರೆ ಇಂದಿಗೂ ಕೂಡ ಮಹಿಳಾ ಸದಸ್ಯರಿಗೆ ಪೂರ್ಣ ಪ್ರಮಾಣದ ಬೆಂಬಲವಿಲ್ಲದೆ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಕಾಣಬಹುದಾಗಿದೆ.

ಇಂದು ಮಹಿಳಾ ಸದಸ್ಯರು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅದರಲ್ಲೂ ಗ್ರಾಮ ಪಂಚಾಯಿತಿಗಳಲ್ಲಿ ಸದಸ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ವ್ಯವಸ್ಥೆ ಸಂಪೂರ್ಣವಾಗಿ ಯಶಸ್ವಿಯಾಗಿದೆಯಾ ಎಂಬುದನ್ನು ನಾವು ಅವಲೋಕಿಸಿದಾಗ ಹಾಗೂ ಅದರ ಬಗ್ಗೆ ನಡೆದಿರುವ ಹಲವಾರು ಸಂಶೋಧನೆಗಳನ್ನು ಗಮನಿಸಿದಾಗ ಅವರು ಹಲವಾರು ರಾಜಕೀಯ ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡುಬಂದಿದೆ.

ಮಹಿಳಾ ಸದಸ್ಯರು ಎದುರಿಸುತ್ತಿರುವ ಸಮಸ್ಯೆಗಳಿಗೆ ಹಲವಾರು ಕಾರಣಗಳಿವೆ ಅವುಗಳಲ್ಲಿ ಪ್ರಮುಖವಾದುದು ಅವರಲ್ಲಿನ ಅನಕ್ಷರತೆ. ಅನಕ್ಷರತೆಯಿಂದಾಗಿ ಮಹಿಳಾ ಸದಸ್ಯರಲ್ಲಿ ಅದರಲ್ಲೂ ಗ್ರಾಮಪಂಚಾಯಿತಿ ಸದಸ್ಯರಲ್ಲಿ ರಾಜಕೀಯ ಜ್ಞಾನದ ಅರಿವಿನ ಕೊರತೆಯಿದ್ದು, ಸಭೆಗಳಲ್ಲಿ ಧೈರ್ಯವಾಗಿ ಮಾತನಾಡಲು ಸಾಧ್ಯವಾಗುತ್ತಿಲ್ಲ. ಅಧಿಕಾರಿಗಳನ್ನು ಹಾಗೂ ಪುರುಷ ಸದಸ್ಯರನ್ನು ಪ್ರಶ್ನಿಸಲು ಹಾಗೂ ಸರ್ಕಾರದಿಂದ ಬರುವ ಅನುದಾನದ ಬಗ್ಗೆ ಲೆಕ್ಕಪತ್ರಗಳು ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಪರಿಶೀಲಿಸಲು ಸಾಧ್ಯವಾಗುತ್ತಿಲ್ಲ. ಸರ್ಕಾರದಿಂದ ಬರುವ ಮಾಹಿತಿಗಳನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದಾಗಿ ಅಧಿಕಾರಿಗಳು ಸರ್ಕಾರದ ಯೋಜನೆಗಳ ಹಣವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಜೊತೆಗೆ ಗ್ರಾಮಪಂಚಾಯಿತಿ ಮಹಿಳಾ ಅಧ್ಯಕ್ಷರು ಹೆಚ್ಚಿನ ಸಂಖ್ಯೆಯಲ್ಲಿ ಅನಕ್ಷರಸ್ಥರಾಗಿರುವ ಕಾರಣ ಅಧಿಕಾರಿಗಳು ಮೋಸದಿಂದ ಲಕ್ಷಾಂತರ ರೂಪಾಯಿಗಳ ಚೆಕ್‌ಗಳಿಗೆ ಸಹಿ ಮಾಡಿಸಿಕೊಂಡು ಅನ್ಯಾಯ ಮಾಡುತ್ತಿದ್ದಾರೆ. ಮೂರು ಹಂತಗಳ ಸ್ಥಳೀಯ ಸಂಸ್ಥೆಗಳಲ್ಲೂ ಕೂಡ ಅನಕ್ಷರಸ್ಥ ಮಹಿಳಾ ಸದಸ್ಯರು ಗಂಡಂದಿರ, ಅಧಿಕಾರಿಗಳ ಕೈಗೊಂಬೆಗಳಾಗಿ ಕಾರ್ಯನಿರ್ವಹಿಸುತ್ತಿರುವ ಸ್ಥಿತಿ ಕಂಡುಬಂದಿದೆ.

ಗ್ರಾಮೀಣ ರಾಜಕೀಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಚುನಾಯಿತ ಮಹಿಳಾ ಸದಸ್ಯರು ಎದುರಿಸುತ್ತಿರುವ ಮತ್ತೊಂದು ಸಮಸ್ಯೆಯೆಂದರೆ ಅಧಿಕಾರಿಗಳ ನಿರ್ಲಕ್ಷ್ಯ. ಮೀಸಲಾತಿ ಅಡಿಯಲ್ಲಿ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿರುವ ಮಹಿಳೆಯರಿಗೆ ಪಂಚಾಯತ್ ವ್ಯವಸ್ಥೆಯ ನೀತಿ ನಿಯಮಗಳ ಬಗ್ಗೆಯಾಗಲಿ, ಕಾರ್ಯಕ್ರಮಗಳ ಬಗ್ಗೆಯಾಗಲಿ ಅಭಿವೃದ್ಧಿ ಕಾರ್ಯಗಳು ಹಾಗೂ ಸರ್ಕಾರದಿಂದ ಬರುವ ಅನುದಾನ ಮತ್ತು ಸೌಲಭ್ಯಗಳ ಬಗ್ಗೆಯಾಗಲೀ ಮತ್ತು ಅವರ ಜವಾಬ್ದಾರಿ ಹಾಗೂ ಅದರ ಕರ್ತವ್ಯದ ಬಗ್ಗೆ ಅರಿವಿರುವುದಿಲ್ಲ. ಇಂತಹ ಸಂದರ್ಭದಲ್ಲಿ ಸದಸ್ಯರಿಗೆ ಸೂಕ್ತ ಮಾರ್ಗದರ್ಶನ ನೀಡಿ, ಮನೋಬಲವನ್ನು ಹೆಚ್ಚಿಸುವುದರ ಬದಲು ಅಧಿಕಾರಿಗಳು ಅವರನ್ನು ಮಹಿಳೆಯೆಂಬ ಕಾರಣಕ್ಕೆ ನಿರ್ಲಕ್ಷಿಸಿದ್ದಾರೆ. ಇದರಿಂದಾಗಿ ಸಕಾಲಕ್ಕೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗದೆ ಸಾರ್ವಜನಿಕ ನಿಂದನೆಗೆ ಒಳಗಾಗುತ್ತಿದ್ದಾರೆ. ಮಹಿಳಾ ಸದಸ್ಯರು ಏನೇ ಕೇಳಿದರು ಸ್ಪಂದಿಸದೆ ಅಸಹಾಕರ ನೀಡುತ್ತಿರುವುದು ಮಹಿಳೆಯರಿಗೆ ಮುಖ್ಯ ಸಮಸ್ಯೆಯಾಗಿದೆ.

ಕುಟುಂಬ ಸದಸ್ಯರ ಹಸ್ತಕ್ಷೇಪವನ್ನು ಕೂಡ ಮಹಿಳಾ ಸದಸ್ಯರು ಎದುರಿಸುತ್ತಿದ್ದಾರೆ. ಪಂಚಾಯತ್‌ಗಳಲ್ಲಿ ಮಹಿಳಾ ಸದಸ್ಯರಿಗೆ ಸ್ವಂತವಾಗಿ ನಿರ್ಧಾರಕೈಗೊಂಡು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಅಧಿಕಾರವನ್ನು ನೀಡಿರುವುದು ಸರಿಯಷ್ಟೆ. ಆದರೆ ವಾಸ್ತವವಾಗಿ ಮಹಿಳಾ ಸದಸ್ಯರಿಗೆ ನೀಡಿರುವ ಈ ಅಧಿಕಾರದಲ್ಲಿ ಮುಖ್ಯವಾಗಿ ಅವರ ಕುಟುಂಬದ ಸದಸ್ಯರು ಹಸ್ತಕ್ಷೇಪ ಮಾಡುತ್ತಿದ್ದಾರೆ. ಮಹಿಳಾ ಸದಸ್ಯರು ಧೈರ್ಯವಂತರೂ, ಬುದ್ಧಿವಂತರೂ, ವಿದ್ಯಾವಂತರಾಗಿದ್ದರೂ ಸಹ ಅವರಿಗೆ ಸ್ವತಃ ಸಭೆಗಳಲ್ಲಿ ಹಾಜರಾಗುವುದಕ್ಕಾಗಲೀ, ಪುರುಷ ಸದಸ್ಯರು ಹಾಗೂ ಅಧಿಕಾರಿಗಳ ಜೊತೆ ಚರ್ಚಿಸುವುದಕ್ಕಾಗಲೀ, ಫಲಾನುಭವಿಗಳನ್ನು ಆಯ್ಕೆಮಾಡುವುದಕ್ಕಾಗಲೀ, ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದಕ್ಕಾಗಲೀ ಯಾವುದೇ ಸ್ವಾತಂತ್ರ್ಯ ಮತ್ತು ಅಧಿಕಾರವನ್ನು ನೀಡಿರುವುದಿಲ್ಲ. ಈ ಎಲ್ಲಾ ಕಾರ್ಯಗಳನ್ನು ಅವರ ಕುಟುಂಬದ ಸದಸ್ಯರು ಅಂದರೆ ಅದರಲ್ಲೂ ಮುಖ್ಯವಾಗಿ ಅವರ ಯಜಮಾನರು ನಿರ್ವಹಿಸುತ್ತಿರುವುದನ್ನು ಕಾಣಬಹುದು. ಉದಾಹರಣೆಗೆ ಬಿಹಾರದ ಸ್ಥಳೀಯ ಸರ್ಕಾರದ ವ್ಯವಸ್ಥೆಯನ್ನು ಗಮನಿಸಿದಾಗ ಅಲ್ಲಿ ಹೆಚ್ಚಾಗಿ ಮಹಿಳಾ ಸದಸ್ಯರ ಗಂಡಂದಿರೆ ತೀರ್ಮಾನವನ್ನು ಕೈಗೊಳ್ಳುತ್ತಿದ್ದಾರೆಂಬುದು ಅಧ್ಯಯನದಿಂದ ತಿಳಿದುಬಂದಿದೆ. ಯಾವುದೇ ಒಂದು ಸ್ಥಾನವು ಮಹಿಳೆಗೆ ಮೀಸಲಾಗಿದ್ದರೂ ಹೆಂಡತಿ, ತಾಯಿ, ಯಾರೇ ಚುನಾವಣೆಯಲ್ಲಿ ಗೆದ್ದರೂ ಕೂಡ ಆ ಕುಟುಂಬದ ಯಜಮಾನನೇ ಅದನ್ನು ನಿರ್ವಹಿಸುತ್ತಾನೆ.

ಕುಟುಂಬದ ಸದಸ್ಯರು ಮಹಿಳಾ ಸದಸ್ಯರಿಗೆ ಮಾರ್ಗದರ್ಶನ ನೀಡಬೇಕಾಗುತ್ತದೆ. ಏಕೆಂದರೆ ಮೀಸಲಾತಿ ಮೂಲಕ ಆಯ್ಕೆಯಾಗಿರುವ ಮಹಿಳಾ ಸದಸ್ಯರು ರಾಜಕೀಯ ಕ್ಷೇತ್ರದಲ್ಲಿ ಯಾವ ರೀತಿ ತೀರ್ಮಾನ ತೆಗೆದುಕೊಳ್ಳಬೇಕೆಂಬುದನ್ನು ಹಿರಿಯ ಅಧಿಕಾರಿಗಳು ಹಾಗೂ ಕಾನೂನುಗಳನ್ನು ತಿಳಿದುಕೊಳ್ಳುವುದರ ಮೂಲಕ ಉತ್ತಮ ರೀತಿಯಲ್ಲಿ ಮಹಿಳಾ ಸದಸ್ಯರು ಸಮಸ್ಯೆಗಳನ್ನು ಅರಿತು ಅವುಗಳನ್ನು ಪರಿಹರಿಸಬೇಕಾಗುತ್ತದೆ. ಪುರುಷ ಸದಸ್ಯರು ಗ್ರಾಮ ಪಂಚಾಯತ್ ಹಾಗೂ ತಾಲೂಕು ಪಂಚಾಯತ್‌ಗಳಲ್ಲಿ ಪುರುಷ ಸದಸ್ಯರು; ಮಹಿಳಾ ಸದಸ್ಯರ ಅಧಿಕಾರ ಚಲಾವಣೆಯಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ. ಮೀಸಲಾತಿ ಅಡಿ ರಾಜಕೀಯ ಕ್ಷೇತ್ರಕ್ಕೆ ಕಾಲಿಟ್ಟಿರುವ ಗ್ರಾಮೀಣ ಮಹಿಳೆಯರು ರಾಜಕೀಯ ಕ್ಷೇತ್ರದಲ್ಲಿ ಹೆಚ್ಚಿನ ವಿಷಯಗಳನ್ನು ಮಹಿಳಾ ಸದಸ್ಯರು ಶಿಕ್ಷಣದ ಮೂಲಕ ತಿಳಿದುಕೊಳ್ಳಬೇಕು. ಇಂತಹ ಸಂದರ್ಭದಲ್ಲಿ ಪುರುಷ ಸದಸ್ಯರು ಅವರಿಗೆ ಮಾರ್ಗದರ್ಶನ ನೀಡಿ, ಪ್ರೋತ್ಸಾಹಿಸದೆ ಸಭೆಗಳಲ್ಲಿ ಮಹಿಳಾ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ಕೊಡದೆ, ಅವರ ರಾಜಕೀಯ ಶಕ್ತಿಯನ್ನು ದಮನ ಮಾಡುತ್ತಿದ್ದಾರೆ. ಮಹಿಳಾ ಸದಸ್ಯರ ಬಗ್ಗೆ ಬೇಜವಾಬ್ದಾರಿಯ ಭಾವನೆಯನ್ನು ಹೊಂದಿದ್ದು ಹೆಚ್ಚಿನ ಅಭಿವೃದ್ಧಿ ಕಾರ್ಯಗಳನ್ನು ವಹಿಸದೆ ಹೆಚ್ಚಿನ ಅನುದಾನಗಳನ್ನು ತಾವೇ ಕಸಿದುಕೊಳ್ಳುತ್ತಿದ್ದಾರೆ. ಪಂಚಾಯಿತಿ ಸಭೆಗಳಲ್ಲಿ ತೀರ್ಮಾನ ಕೈಗೊಳ್ಳುವಾಗ ಪಂಚಾಯಿತಿಗಳಲ್ಲಿ ಹಣಕಾಸನ್ನು ವಿನಿಯೋಗಿಸುವಾಗ ಫಲಾನುಭವಿಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಮಹಿಳಾ ಪ್ರತಿನಿಧಿಗಳನ್ನು ಕೇಳುವುದೇ ಇಲ್ಲ. ಅಲ್ಲದೆ ಮಹಿಳಾ ಸದಸ್ಯರು ಸ್ವತಂತ್ರ್ಯವಾಗಿ ಕಾರ್ಯಗಳನ್ನು ಕೈಗೊಳ್ಳುವಂತಿಲ್ಲ. ಜೊತೆಗೆ ಮಹಿಳಾ ಅಧ್ಯಕ್ಷರುಗಳಿಗೆ ಮತ್ತು ಉಪಾಧ್ಯಕ್ಷರುಗಳಿಗೆ ಯಾವುದೇ ಕೆಲಸ ಕಾರ್ಯಗಳಲ್ಲಿ ಸಹಕರಿಸದೆ ಮಹಿಳಾ ಸದಸ್ಯರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದಾರೆ. ಈ ರೀತಿ ಪುರುಷ

ಸದಸ್ಯರ ದಬ್ಬಾಳಿಕೆ ಮತ್ತು ನಿರ್ಲಕ್ಷ್ಯಕ್ಕೆ ಒಳಗಾಗಿರುವ ಮಹಿಳಾ ಸದಸ್ಯರು ಸಾಕಷ್ಟು ಸಂಕಷ್ಟಗಳನ್ನು ಹಾಗೂ ಸವಾಲುಗಳನ್ನು ಎದುರಿಸಿದ್ದು ಧೈರ್ಯದಿಂದ ಪುರುಷ ಸದಸ್ಯರು ನೀಡುವ ಕಿರುಕುಳವನ್ನು ಸಹಿಸಿಕೊಂಡು ರಾಜೀನಾಮೆ ನೀಡದೆ ಅವರ ಅವಧಿಯನ್ನು ಪೂರ್ಣಗೊಳಿಸಿರುವುದು ಅವರ ಮೆಚ್ಚುಗೆಗೆ ಪಾತ್ರವಾಗಿದೆ. ಸುಮಾರು 70 ವರ್ಷಗಳ ಹಿಂದೆ ಸ್ತ್ರೀ–ಪುರುಷರಿಬ್ಬರೂ ಸಮಾನರು. ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರಿಗೆ ಅವಕಾಶ ನೀಡುವುದರಿಂದ ಸಮಸ್ಯೆಗಳನ್ನು ಸುಲಭವಾಗಿ ಅರ್ಥಮಾಡಿಕೊಂಡು ಪರಿಹಾರಗಳನ್ನು ಕಂಡು ಹಿಡಿಯಬಹುದು. ಅಲ್ಲದೆ ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಅರ್ಹರಾದ ಫಲಾನುಭವಿಗಳಿಗೆ ತಲುಪಿಸಲು ಸಾಧ್ಯವಾಗುತ್ತದೆ. ರಾಜಕೀಯ ಕ್ಷೇತ್ರಕ್ಕೆ ಪುರುಷ ಮತ್ತು ಮಹಿಳಾ ಸದಸ್ಯರಿಬ್ಬರ ಸಹಕಾರವು ಅಗತ್ಯ. ಆಗ ಮಾತ್ರ, ಗ್ರಾಮಗಳಿಗೆ ರಾಜ್ಯಕ್ಕೆ, ದೇಶಕ್ಕೆ ಉತ್ತಮ ಆಡಳಿತ ನೀಡಲು ಸಾಧ್ಯವಾಗುತ್ತದೆ. ಆದ್ದರಿಂದ ಪುರುಷ ಸದಸ್ಯರು ಮತ್ತು ಮಹಿಳಾ ಸದಸ್ಯರ ಜೊತೆ ಅನುಚಿತವಾಗಿ ವರ್ತಿಸದೆ, ದಬ್ಬಾಳಿಕೆ ನಡೆಸದೆ ಅವರಿಗೆ ಸಹಕಾರ ನೀಡಿ, ಗ್ರಾಮದ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಕಾರ್ಯನಿರ್ವಹಿಸಿದರೆ ಸರ್ಕಾರದ ಯೋಜನೆಗಳು ಯಶಸ್ವಿಯಾಗುತ್ತವೆ.

ಹೀಗೆ ಮಹಿಳಾ ಸದಸ್ಯರಿಗೆ ಪಂಚಾಯತ್ ವ್ಯವಸ್ಥೆಯು ಸ್ಥಾನ ನೀಡಿದ್ದರೂ ಕೂಡ ಅಧಿಕಾರ ಚಲಾಯಿಸಲು ಸಾಧ್ಯವಾಗುವುದಿಲ್ಲ. ಮಹಿಳೆಯರನ್ನು ಅಧಿಕಾರದಿಂದ ಕಡೆಗಣಿಸಿದ್ದು ಕುಟುಂಬದ ಸದಸ್ಯರು, ಪುರುಷ ಸದಸ್ಯರು ಅಧಿಕಾರವನ್ನು ಚಲಾಯಿಸುತ್ತಿರುವುದು ಕಂಡುಬಂದಿದೆ.

**ಉಪಸಂಹಾರ**

ಹೀಗೆ ಮಹಿಳಾ ಸದಸ್ಯರು ತಮ್ಮ ಅಧಿಕಾರ ಚಲಾವಣೆಯಲ್ಲಿ ಹಾಗೂ ಆಡಳಿತ ನಿರ್ವಹಣೆಯಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸಿರುವುದು ಕಂಡುಬಂದಿದ್ದು, ತಮ್ಮ ಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸುತ್ತಿರುತ್ತಾರೆ. ಅಧಿಕಾರಿಗಳು ಮತ್ತು ಸದಸ್ಯರ ಭ್ರಷ್ಟಾಚಾರ, ಪುರುಷ ಸದಸ್ಯರು ಹೊಂದಿರುವ ಕೀಳರಿಮೆ ಮನೋಭಾವನೆ ಹಾಗೂ ಜನ ಪ್ರತಿನಿಧಿಗಳ ದಬ್ಬಾಳಿಕೆ ಹಾಗೂ ಅನುದಾನದ ಕೊರತೆಯಿಂದ ಹೆಚ್ಚು ಕಾರ್ಯ ನಿರ್ವಹಿಸಲಾಗದೆ, ರಾಜಕೀಯ ಕ್ಷೇತ್ರದಲ್ಲಿ ನಿರಾಸಕ್ತಿ ಹೊಂದಿದ್ದು ಕೆಟ್ಟ ರಾಜಕೀಯ ವ್ಯವಸ್ಥೆಯಲ್ಲಿ ಸೇವೆ ಸಲ್ಲಿಸುವುದು ಬೇಡ ಎಂಬ ತೀರ್ಮಾನಕ್ಕೆ ಬರಲಾಗಿದೆ. ರಾಜಕೀಯ ಕ್ಷೇತ್ರಕ್ಕೆ ಹೊಸದಾಗಿ ಹೆಜ್ಜೆ ಇಟ್ಟಿರುವ ಮಹಿಳಾ ಸದಸ್ಯರಿಗೆ ಅವರ ಕುಟುಂಬದ ಸದಸ್ಯರು ಧೈರ್ಯ ಹೇಳುತ್ತಾ, ಬೆನ್ನೆಲುಬಾಗಿ ನಿಂತು ಪ್ರೋತ್ಸಾಹಿಸಬೇಕು. ಅಧಿಕಾರಿಗಳು ಶಾಸನ ಸಭಾಧ್ಯಕ್ಷರು ಪುರುಷ ಸದಸ್ಯರು ಅವರಿಗೆ ಉತ್ತಮ ಮಾರ್ಗದರ್ಶನ ನೀಡಿ ಪಂಚಾಯತ್ ವ್ಯವಸ್ಥೆ ನೀಡಿರುವ ಅಧಿಕಾರವನ್ನು ಸ್ವತಂತ್ರವಾಗಿ ಚಲಾಯಿಸಲು ಅವಕಾಶ ಮಾಡಿಕೊಟ್ಟಾಗ ಮಹಿಳಾ ಸದಸ್ಯರು ರಾಜಕೀಯ ಕ್ಷೇತ್ರದಲ್ಲಿ ಬೆಳೆಯಲು ಹಾಗೂ ಪಂಚಾಯತ್ ರಾಜ್ ವ್ಯವಸ್ಥೆಗೆ ಸಾಮಾಜಿಕ ನ್ಯಾಯ ದೊರಕಿಸಿಕೊಟ್ಟು ತಮ್ಮದೇ ಆದ ಕೊಡುಗೆ ನೀಡಲು ಸಾಧ್ಯವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ಮಿಶ್ರ, ಶ್ವೇತಾ. (1997). ವುಮೆನ್ ಅಂಡ್ 73 ಕಾನ್‌ಸ್ಟಿಟ್ಯೂಷನಲ್ ಅಮೆಂಡ್‌ಮೆಂಟ್ ಆಕ್ಟ್ : ಎ ಕ್ರಿಟಿಕಲ್ ಅಪ್ರೈಸಲ್. ಸೋಷಿಯಲ್ ಆಕ್ಷನ್ (ಸಂಪುಟ 44)
- ಸತ್ಯ, ಸುಂದರಂ. (2011). ರೂರಲ್ ಡೆವಲಪ್‌ಮೆಂಟ್ಸ್, ಹಿಮಾಲಯ ಪಬ್ಲಿಕೇಷನ್, ನವದೆಹಲಿ.
- ಶರ್ಮಾ, ರವೀಂದ್ರ. (1974). ವಿಲೇಜ್ ಪಂಚಾಯತ್ ಇನ್ ರಾಜಸ್ತಾನ್. ಆಲೇಕ್ ಪಬ್ಲಿಷರ್ಸ್, ಜಯಪುರ.
- ಶೈಲಜಾ. (2007). ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು. ಪ್ರಸರಾಂಗ, ಹಂಪಿ ವಿಶ್ವವಿದ್ಯಾನಿಲಯ, ಹಂಪಿ.


IIMRD JOURNALS